10. ಎಣ್ಣೆಕಾಳು, ದ್ವಿದಳ ಧಾನ್ಯ, ಹತ್ತಿ ಬೆಳೆಗಳಿಗೂ ಸಹ ರಿಯಾಯಿತಿ ದರದಲ್ಲಿ ವಿವಿಧ ಸವಲತ್ತುಗಳನ್ನು ಒದಗಿಸಲಾಗುತ್ತಿದೆ.
11. 2008–09ನೇ ಸಾಲಿನಲ್ಲಿ ಒಣ ಬೇಸಾಯದಡಿಯಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ರೂ.1000/– ಸಹಾಯಧನ ನೀಡಲಾಗುತ್ತಿದೆ.
12. ರಸಗೊಬ್ಬರ ಮತ್ತು ವಿದ್ಯುಚ್ಛಕ್ತಿಯನ್ನು ರಿಯಾಯಿತಿ ದರದಲ್ಲಿ ನೀಡಲಾಗುತ್ತಿದೆ.
13. ಅಲ್ಲದೆ ಕೃಷಿಗೆ ಸಂಬಂಧಪಟ್ಟ ಇತರೆ ವಿಷಯಗಳನ್ನು ಜಾರಿಗೆ ತರಲಾಗಿದೆ.

ಕರ್ನಾಟಕ ವಿಧಾನ ಸಭೆ

351 ಶ್ರೀ ಸಂಪಂಗಿ ಎನ್ (ಬಾಗೇಪಲ್ಲಿ)

ಮಾನ್ಯ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವರು

ಅ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 1999 ರಿಂದ 2004 ರವರೆಗೂ ಎಷ್ಟು ಬಿಪಿಎಲ್ ಮತ್ತು ಎಪಿಎಲ್ ಕಾರ್ಡುಗಳು, ಅಂತ್ಯೋದಯ ಕಾರ್ಡುಗಳು ವಿತರಣೆಯಾಗಿವೆ (ತಾಲ್ಲೂಕುವಾರು ಕಾರ್ಡುಗಳ ವಿವರಣೆ ಒದಗಿಸುವುದು);

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 1999 ರಿಂದ 2004ರವರೆಗೂ ವಿತರಿಸಿರುವ ಬಿಪಿಎಲ್ ಮತ್ತು ಎಪಿಎಲ್ ಕಾರ್ಡುಗಳು, ಅಂತ್ಯೋದಯ ಕಾರ್ಡುಗಳ ವಿವರ ಕೆಳಕಂಡಂತಿದೆ:

ಕ್ರ. ಸಂ.	ತಾಲ್ಲೂಕು	ಅಂತ್ಯೋದಯ	ಬಿಪಿಎಲ್	ಎಪಿಎಲ್
1	ಚಿಕ್ಕಬಳ್ಳಾಪುರ	2918	26523	15550
2	ಚಿಂತಾಮಣಿ	3390	41531	15723
3	ಶಿಡ್ಲಘಟ್ಟ	2956	29382	8424
4	ಗೌರಿಬಿದನೂರು	4796	43435	8121
5	ಬಾಗೇಪಲ್ಲಿ	4398	30856	5046
6	ಗುಡಿಬಂಡೆ	787	10694	1272
	ಒಟ್ಟು	19245	182421	54136

ಆ) 2004 ರಿಂದ ಈವರೆಗೂ ಅಂದರೆ 2008ನೇ ಸಾಲಿನವರೆಗೂ ವಿತರಣೆಯಾಗಿರುವ ಬಿಪಿಎಲ್ ಮತ್ತು ಅಂತ್ಯೋದಯ ಕಾರ್ಡುಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ಕಾರ್ಡುತಗಳ ವಿವರಣೆ ಒದಗಿಸುವುದು);

2004 ರಿಂದ ಈವರೆಗೂ ಅಂದರೆ 2008ನೇ ಸಾಲಿನವರೆಗೂ ವಿತರಣೆಯಾಗಿರುವ ಬಿಪಿಎಲ್ ಮತ್ತು ಅಂತ್ಯೋದಯ ಕಾರ್ಡುಗಳ ಸಂಖ್ಯೆ ವಿವರ ಕೆಳಕಂಡಂತಿದೆ:–

ಕ್ರ. ಸಂ.	ತಾಲ್ಲೂಕು	ಅಂತ್ಯೋದಯ	ಬಿಪಿಎಲ್
1	ಚಿಕ್ಕಬಳ್ಳಾಪುರ	4909	27806
2	ಚಿಂತಾಮಣಿ	6878	41257
3	ಶಿಡ್ಲಘಟ್ಟ	4837	23527
4	ಗೌರಿಬಿದನೂರು	8215	43876
5	ಬಾಗೇಪಲ್ಲಿ	6231	30301
6	ಗುಡಿಬಂಡೆ	1719	7470
	ಒಟ್ಟು	32789	174240

ಇ) ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಒಳಪಟ್ಟಿರುವ ಹಳ್ಳಿಗಳು ನಂಜುಂಡಪ್ಪ ವರದಿ ಪ್ರಕಾರ ಅತೀ ಹಿಂದುಳಿದ ಪ್ರದೇಶಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಈ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಒಟ್ಟು ಎಷ್ಟು ಆಹಾರ ವಿತರಣಾ ಘಟಕಗಳಿವೆ (ತಾಲ್ಲೂಕುವಾರು ವಿವರ ನೀಡುವುದು);

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 563 ನ್ಯಾಯಬೆಲೆ ಅಂಗಡಿಗಳು ಮತ್ತು 6 ಸಗಟು ಮಳಿಗೆಗಳು ಇರುತ್ತವೆ. ತಾಲ್ಲೂಕುವಾರು ವಿವರ ಕೆಳಕಂಡಂತಿದೆ:

ಕ್ರ. ಸಂ.	ತಾಲ್ಲೂಕು	ನ್ಯಾಯಬೆಲೆ ಅಂಗಡಿಗಳು	ಸಗಟು ಮಳಿಗೆಗಳು
1	ಚಿಕ್ಕಬಳ್ಳಾಪುರ	106	1.TAPCMS
2	ಚಿಂತಾಮಣಿ	130	1. KFCSC
3	ಶಿಡ್ಲಘಟ್ಟ	85	1. KFCSC
4	ಗೌರಿಬಿದನೂರು	115	1. KFCSC
5	ಬಾಗೇಪಲ್ಲಿ	101	1. KFCSC
6	ಗುಡಿಬಂಡೆ	26	1.TAPCMS
	ಒಟ್ಟು	563	6

ಉ) ಈ ಘಟಕಗಳ ಮೂಲಕ ಪೂರೈಕೆಯಾದ ಆಹಾರಧಾನ್ಯಗಳು ಎಷ್ಟೆಷ್ಟು?

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ನ್ಯಾಯಬೆಲೆ ಅಂಗಡಿಗಳ ಮೂಲಕ ಪ್ರತಿ ಮಾಹೆಗೆ ವಿತರಿಸಲಾಗುತ್ತಿರುವ ಆಹಾರಧಾನ್ಯಗಳ ತಾಲ್ಲೂಕುವಾರು ವಿವರ:– (ಕ್ವಿಂಟಾಲ್‌ಗಳಲ್ಲಿ)

ಕ್ರ. ಸಂ.	ತಾಲ್ಲೂಕು	ಅಂತ್ಯೋದಯ		ಬಿಪಿಎಲ್	
		ಅಕ್ಕಿ	ಗೋಧಿ	ಅಕ್ಕಿ	ಗೋಧಿ

1	ಚಿಕ್ಕಬಳ್ಳಾಪುರ	1423.61	294.54	4367.44	655.33
2	ಚಿಂತಾಮಣಿ	1994.62	412.62	6595.40	988.43
3	ಶಿಡ್ಲಘಟ್ಟ	1402.73	290.22	3687.00	597.67
4	ಗೌರಿಬಿದನೂರು	2382.35	492.90	6684.52	1002.32
5	ಬಾಗೇಪಲ್ಲಿ	1806.99	373.86	4808.64	819.02
6	ಗುಡಿಬಂಡೆ	498.51	103.14	1214.40	179.53
	ಒಟ್ಟು	9508.81	1967.28	27357.40	4242.30

ಆನಾಸ 43 ಡಿಆರ್‌ಪಿ 2009

(ಹೆಚ್.ಹಾಲಪ್ಪ)
ಆಹಾರ ಮತ್ತು ನಾಗರಿಕ ಸರಬರಾಜು
ಮತ್ತು ಗ್ರಾಹಕ ವ್ಯವಹಾರಗಳ ಸಚಿವರು

ಕರ್ನಾಟಕ ವಿಧಾನ ಸಭೆ

384 ಮಾನ್ಯ ಶ್ರೀ ಖಾದರ್ ಯು.ಟಿ.
ಮಾನ್ಯ ತೋಟಗಾರಿಕೆ ಹಾಗೂ ಬಂಧಿಖಾನೆ ಸಚಿವರು

ಅ) ಮಂಗಳೂರು ಬಂದಿಖಾನೆಯನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸಲಾಗುವುದೇ: ಹಾಗಿದ್ದಲ್ಲಿ ಇದನ್ನು ಯಾವಾಗ ಸ್ಥಳಾಂತರಿಸಲಾಗುವುದು;

ಮಂಗಳೂರಿನಲ್ಲಿ ಸದ್ಯಕ್ಕೆ ಹೊಸ ಬಂದಿಖಾನೆಯು ನಿರ್ಮಾಣವಾಗುತ್ತಿಲ್ಲ. ಹೀಗಾಗಿ, ಸ್ಥಳಾಂತರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಹಾಗಿದ್ದಲ್ಲಿ, ಇದಕ್ಕಾಗಿ ಮೀಸಲಿಟ್ಟ ಹಣ ಎಷ್ಟು?

ಪ್ರಶ್ನೆ ಉದ್ಭವಿಸುವುದಿಲ್ಲ.

ಸಂಖ್ಯೆ:ಹೆಚ್‌ಡಿ 57 ಪಿಆರ್‌ಎ 2009

ಸಹಿ/-
(ಉಮೇಶ್ ವಿ. ಕತ್ತಿ)
ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು

(ಟಿ. ಕೃಷ್ಣಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಸೆರಮನೆ ಮತ್ತು ಸಿನಿಮಾ)